
ಜಿ.ಕೆ. ರವೀಂದ್ರಕುಮಾರ್

# ಸಿಕಾಡ ಮತ್ತು ಅಂಗುಲಹುಳು ಸಂವಾದ



(ತಾನು ಪ್ರಪಂಚ ಅಳೆಯುವ ಹುಳು ಅಂತ ಸುಳ್ಳು ಹೇಳಿ ಕೋಗಿಲೆಯ ಹಾಡು ಅಳೆಯುತ್ತ ಜಾಗಬಿಟ್ಟು ಜೀವ ಉಳಿಸಿಕೊಂಡ ಎ.ಕೆ. ರಾಮಾನುಜನ್ ಕವಿತೆ 'ಅಂಗುಲ ಹುಳುವಿನ ಪರಕಾಯಪ್ರವೇಶ'ದ 'ಅಂಗುಲ ಹುಳು' ಹಾಗೂ ಹದಿನೇಳು ವರ್ಷ ಕೋಶಾವಸ್ಥೆಯಲ್ಲಿ ಭೂಮಿಯೊಳಗೆ ಕೂತು ಹೊರಬಂದು ನಾಲ್ಕುವಾರ ಸತತ ಕೂಗಿ ಸಾಯುವ ಜಿ.ಕೆ.ಆರ್‌ ಕವಿತೆಯ 'ಸಿಕಾಡ' ಈ ಕವಿತೆಯಲ್ಲಿ ಮುಖಾಮುಖಿಯಾಗಿವೆ)

ಅಂದು ಕೋಗಿಲೆಯ ಬಾಯಿಂದ ತಪ್ಪಿಸಿಕೊಂಡು ಹೊರಟು
ಇಂಚು ಇಂಚೇ ಸಾಗಿ ಇಷ್ಟು ದಿನವಾಯಿತು ಬರುವಲ್ಲಿ
ಅಮೆರಿಕೆಯಿಂದ ಇಂಡಿಯಾದವರೆಗೆ ಸಾಗುವಲ್ಲಿ
ಪರಕಾಯ ಪ್ರವೇಶದಿಂದ ಹೊರಬಂದ ಅಂಗುಲ ಹುಳು
ಹೇಳುತ್ತಲೇ ಇದೆ ಬೆವರೂ ಒರೆಸಿಕೊಳ್ಳದೆ ಒಂದೇ ಸಮ

ಮೈಸವರಿ ಸಮಾಧಾನಿಸಿ ಸಿಕಾಡ ಹೇಳಿತು, ಏನು ಅಚ್ಚರಿ?
ನೀನು ಬರಲೆಂದೇ ಕಾಯುತ್ತ ಕೂತಿದ್ದಂತೆ ನಾನು
ಬಂದೆಯಲ್ಲ ಇನ್ನು ನಾನು ತೆರಳಬೇಕೇನೋ

ಇದೇನು ಅವತಾರ ಕೆಟ್ಟು ಹೋಯಿತೇ ಶಾಪ ವಿಮೋಚನೆಯಾಗಲು?
ಇರಲಿ, ಅದೇನು ಕೆಲಸವಿಲ್ಲದೆ ಕೂಗಿ ಕೂಗುತ್ತಲೇ ಸಾಯುವೆಯಲ್ಲ
ಸಾಯಲೆಂದೇ ವರುಷಗಟ್ಟಲೆ ಕಾಯುವೆಯಲ್ಲ
ಬದುಕಿನ ಆನಂದ ತಿಳಿಯದೆ ಹೋಗುವುದಾದರೂ ಯಾಕೆ?

ಅಂಗುಲದ ಹುಳದ ಪ್ರಶ್ನೆಗೆ ನಕ್ಕ ಸಿಕಾಡ ಕೇಳಿತು
ಬದುಕಲೆಂದೇ ನೀನು ಹಕ್ಕಿ ಪ್ರಾಣಿಗಳಿಂದ ತಪ್ಪಿಸಿಕೊಂಡು
ಜೀವ ಬಾಯಾರಿಕೆಯಲ್ಲಿ ವರುಷಗಟ್ಟಲೆ ತೆವಳಿದೆಯಲ್ಲಾ
ಖಂಡ ದಾಟಿದರೂ ದೊರೆತ ಆನಂದವಾದರೂ ಏನು ನಿನಗೆ?

ಏನು ಇಲ್ಲದೆಯೂ ಬೇಕಿಲ್ಲದೆಯೂ
ನಾನು ಸವೆದು ಕಾಲ ಸವೆದು ಗುರಿಯು ಸವೆದು ಸವೆದು
ಉತ್ತರವಿಲ್ಲದೆ ತಲೆ ಕೊಡವಿತು ಅಂಗುಲ ಹುಳು